ಸಿ.ಸಿ. ನಂಬರಃ 292/2020

ಪಿ. ಡಬ್ಲ್ಯೂಃ 1

( ದಿನಾಂಕಃ 01-06-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .)

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎನ್.ಆರ್.ಎನ್ ವಕೀಲರಿಂದ

ಅಂಕೋಲಾದ ಹೊಸ ಬಸ್ ಸ್ಟ್ಯಾಂಡಿನ ಕಟ್ಟಡ ಉತ್ತರದ ಭಾಗದಿಂದ ಪ್ರಾರಂಬಿಸಿರುತ್ತಾರೆ ಎಂದರೆ ಸರಿ. ಜೈಹಿಂದ್ ಹೈಸ್ಕೂಲ್ ಹಾಗೂ ಪೊಲೀಸ್ ಠಾಣೆ ಬಸ್ ಸ್ಟ್ಯಾಂಡಿನ ಪಶ್ಚಿಮಕ್ಕಿದೆ ಎಂದರೆ ಸರಿ. ಅಂಕೋಲಾದ ಮೊದಲಿನ ಬಸ್ ಸ್ಟ್ಯಾಂಡಿನ ಕಂಟ್ರೋಲ್ ರೂಮ್ ಸಾಗವಾನಿ ಮರ ಇದ್ದ ಭಾಗದಲ್ಲಿ ಅಂದರೆ ಪೂರ್ವದ ಕಡೆ ಇತ್ತು. ಸದರಿ ರೂಮಿನ ಮುಖ ಉತ್ತರದ ಕಡೆ ಇತ್ತು ಎಂದರೆ ಸರಿ. ಆರೋಪಿಗೆ ಕರ್ತವ್ಯ ತಡೆ ಆದೇಶವನ್ನು ಸಹಾಯಕ ಸಿಬ್ಬಂದಿಯಾದ ವೇದಾ ನಾಯ್ಕ ರವರು ಜಾರಿ ಮಾಡಿರುತ್ತಾರೆ. ಸದರಿ ಪ್ರತಿಯನ್ನು ತನಿಖಾಧಿಕಾರಿಗೆ ನೀಡಿದ ಬಗ್ಗೆ ನೆನಪಿಲ್ಲ. ನಿಪಿ-2 ಜಾರಿ ಮಾಡಿದ ದಿನವೇ ಕರ್ತವ್ಯ ತಡೆ ಆದೇಶ ಕೂಡಾ ಜಾರಿ ಮಾಡಲಾಗಿದೆ. ನಿಪಿ-2 ರಲ್ಲಿ ನೋಟೀಸಿಗೆ ಉತ್ತರ 7 ದಿನಗಳೊಳಗಾಗಿ ನೀಡದಿದ್ದರೆ, ಏಕಪಕ್ಷೀಯವಾಗಿ ನಿರ್ಣಯ ಕೈಗೊಳ್ಳಲಾಗುತ್ತದೆಂದು ತಿಳಿಸಲಾಗಿದೆ ಎಂದರೆ ಸರಿ. ನಿಪಿ-2 ರ ನೋಟೀಸಿನ ಮೇಲೆ ಆರೋಪಿ ವಿರುದ್ಧ ಕರ್ತವ್ಯ ತಡೆ ಆದೇಶವಾಗಿದೆ ಎಂದರೆ ಸರಿಯಲ್ಲ. ನಿಪಿ-2 ರ ಜೊತೆ ಬಂದ ಆದೇಶದ ಪ್ರತಿಯನ್ನು ನಾನು ಪಡೆದಿದ್ದೇನೆ. ನಿಪಿ-2 ಹಾಗೂ ಕರ್ತವ್ಯ ತಡೆ ಆದೇಶದ ಜಾರಿ ಮಾಡಿದ್ದ ಬಗ್ಗೆ ವೇದಾ ನಾಯ್ಕ ರವರು ಆರೋಪಿ ಕಡೆಯಿಂದ ಸ್ವೀಕೃತಿ ಪಡೆದಿದ್ದಾರೆ. ವೇದಾ ನಾಯ್ಕ ರವರು ಆಡಳಿತ ಶಾಖೆಯ ಸಹಾಯಕರಾಗಿ ಆ ದಿನ ಕೆಲಸದಲ್ಲಿದ್ದರು. ಫಿರ್ಯಾದಿ ನೀಡುವ ಸಮಯದಲ್ಲಿ ಸದರಿ ವಿಷಯ ನನ್ನ ಗಮನಕ್ಕಿತ್ತು ಎಂದರೆ ಸರಿ. ನಿಶಾನೆ ಎಂದು ಗುರುತಿಸಲಾದ ದಾಖಲೆಗಳಲ್ಲಿ ಕರ್ತವ್ಯ ತಡೆ ಆದೇಶದ ಪ್ರತಿ ಇರುವುದಿಲ್ಲ. ನಿಪಿ-2 ನ್ನು ತನಿಖಾಧಿಕಾರಿಗೆ ನಾನೆ ನೀಡಿದ್ದೇನೆ. ನಿಪಿ-2 ರಲ್ಲಿ ಕೊನೆಯ 3 ಸಾಲುಗಳ ಕುರಿತು ಷರಾ ಬರೆದಿಲ್ಲ ಎಂದರೆ ಸರಿ. ನಿಪಿ- 2 ರ ಮೇಲೆ ವೇದಾ ನಾಯ್ಕ ರವರ ಸಹಿ ಇಲ್ಲ ಎಂದರೆ ಸರಿ. ನಿಪಿ-2 ರ ಮೇಲೆ ನಮೂದಿಸಿದ

ದಿನಾಂಕ ಕೈಬರಹ ಹಾಗೂ ಟೈಪ್ ನಿಂದ ಕೂಡಿದೆ ಎಂದರೆ ಸರಿ. ಆರೋಪಿ ಹಾಜರುಪಡಿಸಬೇಕೆಂದು ನಿಪಿ-2 ರಲ್ಲಿ ಕೇಳಿದ ದಾಖಲೆಗಳನ್ನು ತನಿಖಾಧಿಕಾರಿಗಳಿಗೆ ನೀಡಿಲ್ಲ.

ನಿಪಿ-1 ರಲ್ಲಿ ತಿಳಿಸಿದ ವ್ಯಕ್ತಿಗಳ ಮೇಲೆ ಆರೋಪಿ ಕೈಗೊಂಡಿರುತ್ತಾನೆಂದು ತಿಳಿಸಿದ ಕ್ರಮದ ಕುರಿತು ಇರುವ ಕುರಿತು ದಾಖಲೆಗಳನ್ನು ತನಿಖಾಧಿಕಾರಿಗಳಿಗೆ ನೀಡಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ಅಡಕಗಳೆಂದು ತಿಳಿಸಿದ ದಾಖಲೆಗಳನ್ನು ತನಿಖಾಧಿಕಾರಿಗಳಿಗೆ ನೀಡಿಲ್ಲ. ಸದರಿ ದಾಖಲೆಗಳ ವಿವರ ಸುಳ್ಳಿನಿಂದ ಕೂಡಿದ್ದರಿಂದ ಅವುಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳು ನಮ್ಮ ಕಾರ್ಯಾಲಯದಲ್ಲಿ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ತೇಜೋವಧೆ ಮಾಡಬೇಕೆಂದು ಹಾಗೂ ಹುದ್ದೆಯಿಂದ ತೆಗೆದು ಹಾಕಬೇಕೆಂದು ಸುಳ್ಳು ಮಾಹಿತಿ ನೀಡಿರುತ್ತೀರಿ ಎಂದರೆ ಸರಿಯಲ್ಲ.

ನಿಪಿ-5 ರಿಂದ 7 ನಾನೇ ನೀಡಿರುತ್ತೇನೆ ಎಂದರೆ ಸರಿ. ಇಲಾಖೆಯಲ್ಲಿ ಮೇಲಾಧಿಕಾರಿ ಇದ್ದಾರೆ ಎಂದರೆ ಸರಿ. ನಿಪಿ-5 ರಿಂದ 7 ನೀಡುವಾಗ ಮೂಲ ದಾಖಲೆಗಳನ್ನು ನೋಡಿದ ಕುರಿತು ನಮೂದನೆ ಇಲ್ಲ ಎಂದರೆ ಸರಿ. ಸದರಿ ದಾಖಲೆಗಳನ್ನು ಮಸ್ಟರ್ಡ(ಹಾಜರಾತಿ) ಪುಸ್ತಕದ ಮೇಲೆ ನೀಡಿರುತ್ತೇನೆ. ಹಾಜರಾತಿ ಪುಸ್ತಕವನ್ನು ತನಿಖಾಧಿಕಾರಿಗೆ ನೀಡಿಲ್ಲ. ಆರೋಪಿ ನನಗಾಗಲೀ ವ, ಚಾಸಾ-6 ಮತ್ತು 7 ರವರಿಗೆ ತೊಂದರೆ ನೀಡದಿದ್ದರೂ ಸಹ ಸುಳ್ಳು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ನಾನು ಕರ್ತವ್ಯದಲ್ಲಿದ್ದ ಬಗ್ಗೆ ದಾಖಲಾತಿ ಇರದೇ ಇರುವುದರಿಂದ ಒದಗಿಸಿಲ್ಲ ಎಂದರೆ ಸರಿಯಲ್ಲ. ಪ್ರತಿಯಾಗಿ ಸುಳ್ಳು ದೃಢೀಕರಣ ಪತ್ರ ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಫಿರ್ಯಾದಿಯನ್ನು ಮಧ್ಯಾಹ್ನ ಅಂದಾಜು 2 ಗಂಟೆಗೆ ಠಾಣೆಯಲ್ಲಿ ಬರೆಯಲಾಗಿದೆ.

ಮೇಲಾಧಿಕಾರಿ ಹೆಬ್ಬಾಳ ಅಂಬುವವರು ಇದ್ದು, ಅಂದಾಜು ಮಧ್ಯಾಹ್ನ 12 ಗಂಟೆಗೆ ಫೋನ್ ಮುಖಾಂತರ ಚರ್ಚಿಸಿ ಪ್ರಕರಣ ದಾಖಲಿಸಿದ್ದೇನೆ. ಹೆಬ್ಬಾಳ ರವರ ಕಚೇರಿ ಮೊಬೈಲ್ ಸಂಖ್ಯೆ 7760991700 ಇದೆ. ನನ್ನ ಮೊಬೈಲ್ ನಂಬರಿಗೆ ಕರೆ ಬಂದ ಕುರಿತು ಕಾಲ್ ರಿಜಿಸ್ಟರ್ ಹಾಜರುಪಡಿಸಲಾಗಿದೆ. ಆ ದಿನ ಹೆಬ್ಬಾಳರವರಿಗೆ ಎಷ್ಟು ಸಾರಿ ಫೋನ್ ಕರೆ ಮಾಡಿದ್ದೇನೆಂದು ನೆನಪಿಲ್ಲ. ಹೆಬ್ಬಾಳ ರವರಿಗೆ ಕರೆ ಮಾಡಿದ್ದ ಬಗ್ಗೆ

ತನಿಖಾಧಿಕಾರಿಗೆ ನೀಡಿಲ್ಲ. ಘಟನೆ ದಿವಸ ನನಗೆ ಬಂದ ಮೋಬೈಲ್ ನಂಬರ ಹಾಗೂ ಫಿರ್ಯಾದಿಯಲ್ಲಿ ನಮೂದಿಸಿದ ನನ್ನ ಬಳಿ ಇತ್ತು ಎಂದು ಹೇಳುವ ಮೋಬೈಲ್ ನಂಬರ ಯಾರಿಗೆ ಸಂಬಂಧಪಟ್ಟಿದೆ ಎಂದು ದಾಖಲೆ ತನಿಖಾಧಿಕಾರಿಗಳಿಗೆ ನೀಡಿಲ್ಲ.

ಹೆಬ್ಬಾಳ ರವರಿಗೆ ನಾನು ಕರೆ ಮಾಡಿದ ಬಗ್ಗೆ ದಾಖಲೆ ಇಲ್ಲ ಎಂದರೆ ಸಾಕ್ಷಿ ಕಾಲ್ ಡಿಟೇಲ ಯಾದಿಯನ್ನು ನೋಡಿ ಹೆಬ್ಬಾಳ ರವರ ಮೋಬೈಲ್ ಸಂಖ್ಯೆಯನ್ನು ಗುರುತಿಸಿರುತ್ತಾರೆ. ಸದರಿ ದಾಖಲೆಯನ್ನು ನಿಪಿ–8 ಹಾಗೂ ಹೆಬ್ಬಾಳ ರವರ ಕಚೇರಿ ಮೋಬೈಲ್ ಸಂಖ್ಯೆ ಎಂದು ತೋರಿಸಿದ ನಂಬರನ್ನು ನಿಪಿ–8 ಎ ಎಂದು ಗುರುತಿಸಲಾಯಿತು. ನಿಪಿ–8 ಎ ಎಂದು ತೋರಿಸಿದ ನಂಬರಿನ ಮುಂದೆ ಸಮಯವನ್ನು 14.52.48 ಎಂದು ನಮೂದಿಸಿದೆ ಎಂದರೆ ಸರಿ. ಸದರಿ ಕಾಲನ್ನು ಫಿರ್ಯಾದಿ ದಾಖಲಿಸಿದ ನಂತರ ಮಾಡಿರುತ್ತೀರಿ ಎಂದರೆ ಮೊದಲೇ ಮಾಡಿದ್ದೇನೆ ಎಂದು ಹೇಳುತ್ತಾರೆ. ನಿಪಿ–8 ಎ ಮುಂದೆ 'In' ಎಂದು ಬರೆಯಲಾಗಿದೆ ಎಂದರೆ ಸರಿ. ಹೆಬ್ಬಾಳ ರವರ ಜೊತೆ ಮಾತನಾಡಿದ ನಂತರ ಫಿರ್ಯಾದಿ ದಾಖಲಿಸಿದ ಬಗ್ಗೆ ಅವರ ಹೆಸರನ್ನಾಗಲೀ ವ, ಅವರ ದರ್ಜೆಯ ಕುರಿತು ಫಿರ್ಯಾದಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಮೇಲಾಧಿಕಾರಿ ಎಂದು ಮಾತ್ರ ನಮೂದಿಸಿದ್ದೇನೆ ಎಂದು ಹೇಳುತ್ತಾರೆ. ಅದೇ ರೀತಿ ಚರ್ಚಿಸಿದ ಸಮಯ ನಮೂದಿಸಿಲ್ಲ ಹಾಗೂ ನಮೂದಿಸಲು ತೊಂದರೆ ಇರಲಿಲ್ಲ ಎಂದರೆ ಸರಿ.

ಆರೋಪಿ ಆ ದಿನ ಎಷ್ಟು ಸಾರಿ ಕಾಲ್ ಮಾಡಿದ್ದನೆಂದು ನೆನಪಿಲ್ಲ. ಅಂಕೋಲಾ ಬಸ್ ನಿಲ್ದಾಣದಿಂದ ಅಂದಾಜು 3 ಕಿ.ಮೀ ದೂರದಲ್ಲಿ ಬಸ್ ಡಿಪೋ ಇದೆ. ಮೋಟರ್ ಸೈಕಲನಿಂದ ಹೋದರೆ ಅಂದಾಜು 5 ನಿಮೀಷದಲ್ಲಿ ಹೋಗಬಹುದು. ಅಂಕೋಲಾ ಶಹರ ಜನದಟ್ಟನೆಯಿಂದ ಕೂಡಿರುತ್ತದೆ ಎಂದರೆ ಸರಿ. ಡಿಪೋದಲ್ಲಿ ಪ್ರಯಾಣಿಕರ ಓಡಾಟಕ್ಕೆ ಅನುಮತಿ ಇರುವುದಿಲ್ಲ. ಡಿಸೇಲ್ ತುಂಬಿಸಿಕೊಳ್ಳಲು ಬಸ್ಸುಗಳು ಡಿಪೋಗಳಿಗೆ ಬರುತ್ತವೆ. ಪ್ರಯಾಣದಲ್ಲಿ ಬಸ್ಸುಗಳಿಗೆ ಡಿಸೇಲ್ ಕೊರತೆ ಉಂಟಾದರೆ ಅವಾಗಲೂ ಸಹ ಡಿಪೋಕ್ಕೆ ಬರುತ್ತವೆ ಎಂದರೆ ಸರಿ. ಡಿಪೋದ ಮುಂದೆ ಸಾಕಷ್ಟು ಮನೆಗಳಿರುತ್ತವೆ. ಡಿಪೋ ದಕ್ಷಿಣಕ್ಕೆ ಮುಖ ಮಾಡಿದೆ. ಗೇಟಿನಿಂದ ಅಂದಾಜು 40 ಮೀಟರ್ ದೂರದಲ್ಲಿ ಚಾಸಾ–7 ರವರ ಕೆಲಸ ನಿರ್ವಹಣೆ ಸ್ಥಳ ಇದೆ. ಚಾಸಾ–7 ರವರ ನಿರ್ವಹಣೆಯ ಸ್ಥಳದಿಂದ ಚಾಸಾ–8 ರವರ ನಿರ್ವಹಣೆಯ ಸ್ಥಳ ಅಂದಾಜು 15

ಮೀಟರ್ ಇದೆ. ಭದ್ರತಾ ಸಿಬ್ಬಂದಿ ಕೊಠಡಿಯಿಂದ 40 ಮೀಟರ್ ದೂರದಲ್ಲಿ ಚಾಸಾ-7 ರವರ ಕೆಲಸ ನಿರ್ವಹಣೆ ಸ್ಥಳ ಇದೆ. ಸದರಿ ಕೊಠಡಿ ಪೂರ್ವಕ್ಕೆ ಮುಖ ಮಾಡಿ ಇದೆ. ಸದರಿ ಕೊಠಡಿಯಿಂದ ಭದ್ರತೆಗಾಗಿ ಸಿಬ್ಬಂದಿ ನೇಮಿಸಲಾಗಿದೆ. ಚಾಸಾ-6 ಮತ್ತು 7 ರವರು ಆರೋಪಿಯನ್ನು ತಡೆಯುವಂತೆ ಭದ್ರತಾ ಸಿಬ್ಬಂದಿಗೆ ಹೇಳಿದ ಬಗ್ಗೆ ನನ್ನ ಗಮನಕ್ಕಿಲ್ಲ. ಆರೋಪಿ ಡಿಪೋದಿಂದ ಹೊರಗಡೆ ಹೋಗಬೇಕಾದರೆ ಭದ್ರತಾ ಸಿಬ್ಬಂದಿ ಇರುವ ಗೇಟಿನಿಂದ ಹೋಗಬೇಕಾಗುತ್ತದೆ ಎಂದರೆ ಸರಿ. ಆರೋಪಿ ಘಟನೆ ದಿವಸ ಡಿಪೋಗೆ ಬಂದು ಹೋದ ಬಗ್ಗೆ ರಿಜಿಸ್ಟರ್ ನನಗೆ ತೋರಿಸಿಲ್ಲ. ಡಿಪೋದೊಳಗೆ ಭದ್ರತೆ ಕುರಿತಾಗಿ ಏನಾದರೂ ತೊಂದರೆ ಉಂಟಾದರೆ ಸದರಿ ರಿಜಿಸ್ಟರ್ ನಲ್ಲಿ ನಮೂದಾಗುತ್ತದೆ ಎಂದರೆ ಸರಿ. ಘಟನೆ ದಿವಸದ ರಿಜೀಸ್ಟರನ್ನು ಆ ದಿನ ನನ್ನ ಗಮನಕ್ಕೆ ತೋರಿಸಿಲ್ಲ.

ಡಿಪೋಗೆ ಮೇಲ್ವಿಚಾರಕರು ಇರುತ್ತಾರೆ ಎಂದರೆ ಸರಿ. ಚಾಸಾ-6 ಮತ್ತು 7 ರವರ ಜೊತೆ ಆರೋಪಿ ಎಸಹಿರುತ್ತಾನೆಂದು ಹೇಳುವ ಕೃತ್ಯದ ಬಗ್ಗೆ ಮೇಲ್ವಿಚಾರಕರ ಗಮನಕ್ಕಿತ್ತು ಎಂದು ನನಗೆ ತಿಳಿಸಿಲ್ಲ. ಚಾಸಾ-6 ಮತ್ತು 7 ರವರ ಜೊತೆ ಆರೋಪಿ ವರ್ತಿಸಿದ ಘಟನೆ ಸಮಯದಲ್ಲಿ ಯಾರು ಯಾರು ಇದ್ದರು ಎಂದು ತಮ್ಮ ಹೇಳಿಕೆಯಲ್ಲಿ ನನಗೆ ತಿಳಿಸಿರುತ್ತಾರೆ. ಸದರಿ ಸಂಗತಿಯನ್ನು ಫಿರ್ಯಾದಿಯಲ್ಲಿ ವ, ಹೇಳಿಕೆಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸ್ವಚ್ಛತಾ ಸಿಬ್ಬಂದಿಯವರ ಹೆಸರನ್ನೂ ಸಹ ಫಿರ್ಯಾದಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಅ ದಿನ ಬಸ್ ನಿಲ್ದಾಣದಲ್ಲಿ ಯಾವ ಕರ್ತವ್ಯದಲ್ಲಿದ್ದೆ ಎಂದು ಫಿರ್ಯಾದಿಯಲ್ಲಿ ನಮೂದಿಸಿಲ್ಲ ಹಾಗೂ ದಾಖಲೆ ನೀಡಿಲ್ಲ, ಕರ್ತವ್ಯ ದೃಢೀಕರಣದಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿ ಕರ್ತವ್ಯದಲ್ಲಿದ್ದೆ ಎಂದು ಹೇಳುತ್ತಾರೆ. ಘಟನೆ ನನ್ನ ಪ್ರಕಾರ ಬಸ್ ನಿಲ್ದಾಣದಲ್ಲಿದ್ದಾಗ ಆಗಿದೆ. ಬಸ್ ನಿಲ್ದಾಣದಲ್ಲಿ ಘಟನೆಯಾದ ಬಗ್ಗೆ ತನಿಖಾಧಿಕಾರಿ ದಾಖಲೆ ಪಡೆಯಲು ಪ್ರಯತ್ನಿಸಿದ್ದರಾ ಎಂದರೆ ಘಟನಾ ಸ್ಥಳ ತೋರಿಸಲು ಹೇಳಿದ್ದರು ಎಂದು ಹೇಳುತ್ತಾರೆ. ಘಟನಾ ಸ್ಥಳ ತೋರಿಸಿದಾಗ ಸ್ಥಳದಲ್ಲಿ ಯಾರು ಯಾರು ಇದ್ದರು ಎಂದು ತನಿಖಾಧಿಕಾರಿ ವಿಚಾರಿಸಿರುತ್ತಾರೆ. ಆದಿನ ಡಿಪೋದ ಎಲ್ಲ ಸಿಬ್ಬಂದಿ ನನ್ನ ಜೊತೆ ಸ್ವಚ್ಛತಾ ಕಾರ್ಯಾಕ್ರಮದಲ್ಲಿದ್ದರು.

ಆರೋಪಿ ಬಸ್ ನಂಬರ್ ಕೆ ಎ 42/1342 ನ್ನು ನಡೆಸುತ್ತಿದ್ದ ಎಂದರೆ ಸರಿ. ಸದರಿ ಬಸ್ಸು ಏರ್ ಬೇಕ್‌ಗೆ ತುಂಬಿಸುವ ವ್ಯಾಕ್ಯೂಮ್ ನ್ನು ಹಿಡಿಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಬಸ್ಸನ್ನು ಆರೋಪಿಗೆ ಬೆಂಗಳೂರಿಗೆ ತೆಗೆದುಕೊಂಡು ಹೋಗಲು ಹೇಳುತ್ತಿದ್ದೀರಿ,

ಘಟ್ಟದಲ್ಲಿ ಆತ 2 ಮತ್ತು 3 ನೇ ಗೇರಿನಲ್ಲಿ ಕಂಟ್ರೋಲ್ ಮಾಡುತ್ತಾ ಹೋಗಬೇಕು ಎಂದರೆ ಸರಿಯಲ್ಲ. ಈ ರೀತಿ ಗೇರಿನಲ್ಲಿ ಚಲಿಸಿದರೆ ಡಿಸೇಲ್ ನಲ್ಲಿ ವ್ಯತ್ಯಾಸ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಗೇರ್ ತಕ್ಕಹಾಗೆ ಎಕ್ಸಲೇಟರ್ ಕಡಿಮೆ ಇರುತ್ತದೆ ಎಂದು ಹೇಳುತ್ತಾರೆ. ಎತ್ತರದ ಘಟ್ಟದಲ್ಲಿ ಎಕ್ಸಲೇಟರ್ ಜೋರಾಗಿ ಕೊಡದೆ ಪ್ರಯಾಣಿಕರು ತುಂಬಿದ ಬಸ್ಸು ಮುಂದೆ ಹೋಗುವುದಿಲ್ಲ ಎಂದರೆ ಸರಿಯಲ್ಲ. ಗೇರ್ ಸ್ವಿಚ್ ಮಾಡಿದ ಆಧಾರದ ಮೇಲೆ ಎಕ್ಸಲೆಟರ್ ಕೊಡಬೇಕಾಗುತ್ತದೆ ಎಂದು ಹೇಳುತ್ತಾರೆ. ಸದರಿ ಬಸ್ಸಿನ ಗೇರ್ ಸ್ವಿಚ್ ಮಾಡುವ ಎಸ್‌ಕೆಎಂ ಶ್ಯಾಪ್ಟ್ ಕಟ್ಟಾಗಿ ದಾವಣಗೇರೆಯಲ್ಲಿ ಅವಘಡ ಆಗುವ ಸಂಭವವಿತ್ತು ಎಂದರೆ ಸರಿಯಲ್ಲ. ಈ ಕುರಿತು ಆತ ಸ್ವಂತ ಖರ್ಚಿನಲ್ಲಿ ರಿಪೇರಿ ಮಾಡಿಸಿಕೊಂಡಿದ್ದು, ರಿಪೇರಿ ಕುರಿತಾಗಿ ನಾನಾಗಲೀ ವ, ಚಾಸಾ-6 ಮತ್ತು 7 ರವರಾಗಲೀ ಲಕ್ಷ್ಯ ವಹಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಬಸ್ಸನ್ನು ತನಗೆ ನೀಡದಂತೆ ಆರೋಪಿ ವಿನಂತಿ ಪತ್ರ ನೀಡಿದ್ದ ಎಂದರೆ ಸರಿಯಲ್ಲ.

ಪಿ.ಹೆಚ್ ನಾಯ್ಕು, ಸುರೇಶ ನಾಯ್ಕು ಹಾಗೂ ಎ.ಡಿ ನಾಯ್ಕು ಆ ಸಮಯದಲ್ಲಿ ಯುನಿಯನ್ ಲೀಡರ್ ಇದ್ದರು ಎಂದರೆ ಸುರೇಶ ನಾಯ್ಕು ರವರು ಮಾತ್ರ ಪದಾಧಿಕಾರಿಗಳು ಇದ್ದದ್ದು ಮಾಹಿತಿ ಇದೆ ಎಂದು ಹೇಳುತ್ತಾರೆ. ಉಳಿದಿಬ್ಬರು ನಮ್ಮ ಡಿಪೋದಲ್ಲಿ ಕೆಲಸ ಮಾಡುತ್ತಿರಲಿಲ್ಲ, ಆದರೆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಸದರಿ ಯುನಿಯನ್ ಲೀಡರುಗಳು ಸಣ್ಣ ಪುಟ್ಟ ಸಮಸ್ಯಗಳನ್ನು ಬಗೆ ಹರಿಸುವ ಕುರಿತು ನಮ್ಮ ಜೊತೆ ಮಾತನಾಡುತ್ತಿದ್ದರು ಎಂದರೆ ಆ ಸಂದರ್ಭ ಒದಗಿಲ್ಲ ಎಂದು ಹೇಳುತ್ತಾರೆ. ಸದರಿ ಲೀಡರುಗಳು ಸಮಸ್ಯ ಬಂದಾಗ ಸಿಬ್ಬಂದಿ ಪರವಾಗಿ ನಮ್ಮ ಜೊತೆ ಮಾತನಾಡುವ ವ್ಯಕ್ತಿಗಳು ಎಂದರೆ ಸರಿ. ಆರೋಪಿತನು ಗಾಡಿಗೆ ಹಾಕುವ ಡಿಸೇಲ್ ನಲ್ಲಿ ಆಗುವ ಅವ್ಯವಹಾರದ ಕುರಿತು ಹಾಗೂ ಮೆಕ್ಯಾನಿಕ್ ಸೆಕ್ಷೆನ್ ನಲ್ಲಿ ಬಸ್ಸಗಳ ಸರಿಯಾದ ರಿಪೇರಿ ಮಾಡದ ಕುರಿತು ಯುನಿಯನ್ ಲೀಡರ್ ಗಳಾದ ಪಿ. ಹೆಚ್ ನಾಯ್ಕು, ಸುರೇಶ ನಾಯ್ಕು ಹಾಗೂ ಎ.ಡಿ ನಾಯ್ಕು ರವರ ಬಳಿ ಮಾಹಿತಿ ನೀಡುತ್ತಿದ್ದ ಎಂದರೆ ಸರಿಯಲ್ಲ. ಬಸ್ಸಿನ ತಾಂತ್ರಿಕದೋಷದ ಕುರಿತು ಅಪಘಾತವಾದಾಗಲೇಲ್ಲ ಡಿಪೋ ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಪೇಪರ್ ಗಳಲ್ಲಿ ಬರುತ್ತಿತ್ತು ಎಂದರೆ ಸರಿಯಲ್ಲ. ಈ ಕುರಿತಾಗಿ ಚಾಲಕರು ಸಾರ್ವಜನಿಕರ ಮುಂದೆ ತಮ್ಮ ತೊಂದರೆಯನ್ನು ಹೇಳಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಆರೋಪಿ ಡಿಪೋದ ಅವ್ಯವಹಾರದ ಕುರಿತು ಹೊರಗಡೆ ಮಾಹಿತಿ ನೀಡುತ್ತಿದ್ದಾನೆಂದು ಇದರಿಂದ

ಸಾರ್ವಜನಿಕರಿಂದ ನಮಗೆಲ್ಲ ತೊಂದರೆಯಾಗಬಹುದೆಂದು ಈ ಪ್ರಕರಣ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಡಿಸೇಲ್ ವಿಭಾಗ ನನ್ನ ಸುಪರ್ದಿಯಲ್ಲಿ ಬರುತ್ತದೆ. ಮೆಕ್ಯಾನಿಕ್ ವಿಭಾಗವನ್ನು ಚಾಸಾ-6 ಮೇಲ್ವಿಚಾರಣೆ ಮಾಡುತ್ತಾನೆ. ಚಾಸಾ-7 ಬಸ್ಸಿನ ಚಾಲಕ ಮತ್ತು ನಿರ್ವಾಹಕರನ್ನು ನೇಮಿಸುತ್ತಾನೆ. ಆರೋಪಿ ಸದರಿ ಬಸ್ಸನ್ನು ತನಗೆ ಕೊಡಬಾರದೆಂದು ಹಾಗೂ ಅದನ್ನು ಬೆಂಗಳೂರಿಗೆ ತೆಗೆದುಕೊಂಡು ಹೋಗಲು ಆಗುವುದಿಲ್ಲವೆಂದು ತಿಳಿಸಿದರೂ ಸಹ ನಾವೆಲ್ಲ ಸೇರಿ ಸದರಿ ಬಸ್ಸನ್ನು ಆತನಿಗೆ ನೀಡುತ್ತಿದ್ದೇವು ಎಂದರೆ ಸರಿಯಲ್ಲ. ಸದರಿ ಬಸ್ಸನ್ನು ನೀಡಿ ಡಿಸೇಲ್ ವ್ಯತ್ಯಾಸ ಬರಲಿ ಎಂದು ನಾವೆಲ್ಲ ಸೇರಿ ಒಳಸಂಚು ಮಾಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಒಳಸಂಚು ಮಾಡಿ ಆತನ ಮೇಲೆ ಈ ಪ್ರಕರಣ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಡಿಪೋ ಬಳಿ ಹಾಗೂ ಬಸ್ ನಿಲ್ದಾಣದ ಬಳಿ ಸಾರ್ವಜನಿಕರ ಲಭ್ಯತೆ ಇದ್ದರುಾ ಸಹ ಇಲಾಖಾ ಸಿಬ್ಬಂದಿ ಮಾತ್ರ ಹಾಕಿಕೊಂಡು ಸುಳ್ಳು ಪ್ರಕರಣ ಮಾಡಿದ್ದೇವೆ ಎಂದರೆ ಸರಿಯಲ್ಲ. ಕಾರಣ ನಾನಾಗಲೀ ವ, ಚಾಸಾ-6 ಮತ್ತು 7 ರವರಾಗಲೀ ಘಟನಾ ಸಮಯದಲ್ಲಿ ಯಾರು ಯಾರು ಇದ್ದರು ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಸಹಾಯ ಪಡೆದುಕೊಂಡು ಆತನನ್ನು ಇಲಾಖೆಯಿಂದ ಹೊರಹಾಕಲು ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

ಆರೋಪಿ ಮೇಲೆ ಹೋರಸಿದ ದೋಷಾರೋಣೆಯಲ್ಲಿ ತಿಳಿಸಿದ ಸಂಗತಿಗಳು ವ, ಕೃತ್ಯಗಳನ್ನು ಆರೋಪಿ ಎಸಗಿಲ್ಲ ಎಂದರೆ ಸರಿಯಲ್ಲ. ಘಟನೆಗೆ ಪೂರಕವಾಗಿ ಸದರಿ ಕೃತ್ಯ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನನಗಾಗಲೀ, ಚಾಸಾ-6 ಮತ್ತು 7 ರವರ ಕರ್ತವ್ಯಕ್ಕೆ ಆರೋಪಿ ತೊಂದರೆಯುಂಟು ಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ವಿರುದ್ಧ ಕರ್ತವ್ಯ ತಡೆ ಆದೇಶ ಬಂದಿದೆ ಎಂದು ಸುಳ್ಳು ಹೇಳುತ್ತೀರುವೆ ಎಂದರೆ ಸರಿಯಲ್ಲ. ಚಾಸಾ-11 ರವರ ಜೊತೆ ಸೇರಿ ಕಾರಣ ಕೇಳುವ ನೋಟೀಸು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಸ್ಥಳ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಡಿಪೋದಲ್ಲಿ ಪಂಚನಾಮೆ ಮಾಡಿದ್ದಾರೆ ಎನ್ನುವ ಸಮಯದಲ್ಲಿ ನನ್ನ ಸಹಿ ಪಡೆದಿಲ್ಲ. ಪ್ರಕರಣಕ್ಕೆ ಪೂರಕವಾಗಿ ದೃಢೀಕರಣ ಪತ್ರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ತನಿಖಾಧಿಕಾರಿ ಲಿಖಿತವಾಗಿ ಅರ್ಜಿ ನೀಡಿದ್ದ ಬಗ್ಗೆ ನೆನಪಿಲ್ಲ, ಆದರೆ ಕೋರಿಕೆ ಮೇರೆಗೆ ನೀಡಿದ್ದೇನೆ. ತನಿಖಾಧಿಕಾರಿ ಲಿಖಿತ

ಅರ್ಜಿ ನೀಡಿದ್ದ ಬಗ್ಗೆ ನಿಶಾನೆ ದಾಖಲಾತಿಗಳಲ್ಲಿ ಇರುವುದಿಲ್ಲ. ತನಿಖಾಧಿಕಾರಿ ಕೇಳಿದ ದಿನವೇ ದೃಢೀಕರಣ ಪತ್ರ ಒದಗಿಸಿದ್ದೇನೆ. ಆದಿನ ತನಿಖಾಧಿಕಾರಿ ಕಚೇರಿಗೆ ಬಂದಿದ್ದರು. ಸದರಿ ಸಂಗತಿ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ನಾನೇ ಫಿರ್ಯಾದಿದಾರ ಇರುವುದರಿಂದ ಪ್ರಕರಣಕ್ಕೆ ಪೂರಕವಾಗಿ ದೃಢೀಕರಣ ಪತ್ರ ಸೃಷ್ಟಿಸಿ ನೀಡಿದ್ದೇನೆ ಎಂದರೆ ಸರಿಯಲ್ಲ.

ಮೋಬೈಲ್ ಕರೆ ಕುರಿತಾಗಿ ನನ್ನ ನಂಬರ ಹಾಗೂ ಆರೋಪಿ ನಂಬರ ಮತ್ತು ಮೇಲಾಧಿಕಾರಿಗಳ ನಂಬರ ಹೆಸರಿನ ವಿವರಗಳು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ. ದಾಖಲೆಗಳ ಒಂದು ಪ್ರತಿ ನನ್ನ ಬಳಿ ಇದೆ ಎಂದರೆ ಸರಿ. ಅವುಗಳನ್ನು ನೋಡಿ ತಿಳಿದುಕೊಂಡಿದ್ದೇನೆ. ಸದರಿ ದಾಖಲೆಗಳಲ್ಲಿನ ವಿಷಯ ನೋಡಿ ಅದಕ್ಕೆ ಪೂರಕವಾಗುವಂತೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ

ಜೆ ಎಂ ಎಫ ಸಿ, ಅಂಕೋಲಾ.